**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ,**
**ಶೋರಾಪುರ.**
**ಸಿ.ಸಿ. ನಂ.1531/2023**

| | | |
|---|---|---|
| ಸಾಕ್ಷಿದಾರರ ಹೆಸರು | ಃ ದೇವರಾಜ | ಚಾಸಾ ಃ 05 |
| ತಂದೆ ಹೆಸರು | ಃ ನಂದಪ್ಪ | ಪ್ರಾಸಾ ಃ 07 |
| ವಯಸ್ಸು | ಃ19 ವರ್ಷ | |
| ವೃತ್ತಿ | ಃ ವಿಧ್ಯಾರ್ಥಿ | |
| ವಾಸ ಸ್ಥಳ | ಃ ಮಂಗಳೂರು | |

**ಸಾಕ್ಷಿಗೆ ಇಂದು ದಿನಾಂಕಃ 25.04.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ-1 ರಿಂದ 4 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ಆರೋಪಿತರು ನಮ್ಮ ತಾಯಿಗೆ ದಿನಾಂಕ 20-06-2022 ರಂದು ಹೊಡೆದಿರುತ್ತಾರೆ. ಆಗ ಅಲ್ಲಿ ನಾನು, ನನ್ನ ತಂದೆ, ನನ್ನ ತಂಗಿ ಇದ್ದೆವು. ಆರೋಪಿತರಿಗೂ ಮತ್ತು ನಮ್ಮ ತಾಯಿಯ ನಡುವೆ ಜಗಳ ಆಗಿರುತ್ತದೆ. ನಮ್ಮ ಆಡು ಆರೋಪಿತರ ಜಮೀನಿನಲ್ಲಿ ಹೋಗಿರುವ ಸಲುವಾಗಿ ಜಗಳವಾಗಿರುತ್ತದೆ. ನನ್ನ ತಾಯಿ ಮತ್ತು ಅವರ ಮನೆ ಹೆಣ್ಣು ಮಕ್ಕಳು ಜಗಳವಾಡುತ್ತಿದ್ದರು. ಆಗ 1 ನೇ ಆರೋಪಿತನು ಚಾಸಾ-1 ರವರಿಗೆ ಬೆನ್ನಿಗೆ ಬಡುಗೆಯಿಂದ ಹೊಡೆದಿರುತ್ತಾನೆ. 3 ನೇ ಆರೋಪಿತನು ಚಾಸಾ-1 ರವರಿಗೆ ಚಪ್ಪಲಿನಿಂದ ಕಪಾಳಕ್ಕೆ ಹೊಡೆದಿರುತ್ತಾನೆ. ಗೂಳಪ್ಪ ಈತನು ಚಾಸಾ-1 ರವರಿಗೆ ಕಪಾಳಕ್ಕೆ ಹೊಡೆದಿರುತ್ತಾನೆ. 4 ನೇ ಆರೋಪಿರವರು ಚಾಸಾ-1 ರವರಿಗೆ ಕೂದಲು ಹಿಡಿದು ಎಳೆದಾಡಿ ಹೊಡೆದಿರುತ್ತಾನೆ. 1 ನೇ ಆರೋಪಿತನು ಚಾಸಾ -1 ರವರಿಗೆ ಸೀರೆ ಸೇರಗೂ ಹಿಡಿದು ಎಳೆದಾಡಿ ಹೊಡೆದಿರುತ್ತಾನೆ. ಆಗ ನಾನು ಮತ್ತು ಚಾಸಾ-4 ರವರು ಜಗಳ ಬಿಡಿಸಿರುತ್ತೇವೆ. ನಂತರ ಆರೋಪಿತರು ಇನ್ನೊಂದು ಸಾರಿ ನಮ್ಮ ತಂಟೆಗೆ ಬಂದರೆ ಜೀವಸಹಿತ ಬಿಡುವುದಿಲ್ಲ ಎಂದು ಜೀವಬೇದರಿಕೆ ಹಾಕಿರುತ್ತಾರೆ. ನಂತರ ನಾನು ನನ್ನ ತಾಯಿಯನ್ನು ಕರೆದುಕೊಂಡು ಕೆಂಭಾವಿಗೆ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಈ ಕುರಿತು ಪೋಲೀಸರಿಗೆ ಹೇಳಿಕೆ ನೀಡಿರುತ್ತೆನೆ. ನ್ಯಾಯಾಲಯದ ಮುಂದೆ ಇರುವ ಬಡಿಗೆ ಮತ್ತು ಚಪ್ಪಲಿಯನ್ನು

ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ.ಹೆಚ್ ಕೆ ವಕೀಲರಿಂದಃ**

ನಾನು ಬಿ.ಎ 2 ನೇ ವರ್ಷ ಓದುತ್ತಿದ್ದೇನೆ. ನಮ್ಮ ಮನೆಯಲ್ಲಿ ಘಟನೆ ನಡೆದ ದಿನ ನಾನು, ನನ್ನ ತಂದೆ, ನನ್ನ ತಂಗಿ ಮತ್ತು ನನ್ನ ತಮ್ಮ ಇದ್ದೆವು. ನನ್ನ ತಂಗಿಯ ಹೆಸರು ರೇಣುಕಾ ಇರುತ್ತದೆ. ನನ್ನ ತಮ್ಮನ ಹೆಸರು ಪ್ರಕಾಶ ಇರುತ್ತದೆ. ಸದರಿಯವರು 4 ಮತ್ತು 8 ನೇ ತರಗತಿ ಓದುತ್ತಿದ್ದಾರೆ. ನಮ್ಮ ಮನೆಯಲ್ಲಿ ಒಳಗೆ 4 ಜನರು ಇದ್ದವು, ನನ್ನ ತಾಯಿ ಹೊರಗೆ ಇದ್ದಳು. ಗದ್ದಲದ ಬಾಯಿಸಪ್ಪಳ ಕೇಳಿ ಮನೆಯಿಂದ ಹೊರಗೆ ಬಂದಿರುತ್ತೇವೆ. ಪೋಲೀಸರ ಮುಂದೆ ಹೇಳಿಕೆಯಲ್ಲಿ ನಾನು ಮತ್ತು ನನ್ನ ತಂದೆ ಇಬ್ಬರೂ ಹೊರಗಡೆಯಿಂದ ಮನೆ ಹತ್ತಿರ ಬರುತ್ತಿದ್ದಾಗ ಎಂದು ಬರೆದಿರುವುದು ಸುಳ್ಳು ಇರುತ್ತದೆ. ಆ ದಿನ ನಮ್ಮ ಮನೆಯ ಮುಂದೆ 10-15 ಜನ ಇದ್ದರು. ಸದರಿಯವರು ಹೆಸರು ನನಗೆ ಗೊತ್ತಿರುತ್ತದೆ. ಸದರಿಯವರು ನಮ್ಮ ಊರಿನವರು ಇರುತ್ತಾರೆ. ಸದರಿ 10-15 ಜನರ ಹೆಸರು ನನಗೆ ಹೇಳಲು ಬರುತ್ತಾ ಎಂದರೆ ಸಾಕ್ಷಿಯು ನಾವು ಜಗಳ ಬಿಡುಸುತ್ತಿರುವಾಗ ಅಲ್ಲಿ ಯಾರು ಯಾರು ಎಂದು ನನಗೆ ನೆನಪಿಲ್ಲ. ನಮ್ಮ ಸುತ್ತ 10-15 ಮನೆಗಳು ಇರುತ್ತವೆ. ಸದರಿ ಮನೆಯ ಜನರು ಜಗಳ ನಡೆಯುವಾಗ ತಮ್ಮ ಮನೆಯ ಹತ್ತಿರ ನಿಂತು ನೋಡುತ್ತಿದ್ದರು. ಅವರು ಯಾರೂ ಸಹ ಜಗಳ ಬಿಡಿಸಲು ಬಂದಿರುವುದಿಲ್ಲ. ಬಿಸಿ ಊಟ ಮಾಡುವ ಕೆಲಸವನ್ನು ಬಿಡಿಸಿದ್ದಕ್ಕೆ ಸಂಬಂಧಿಸಿದಂತೆನಮಗೂ ಮತ್ತು ಆರೋಪಿತರಿಗೂ ಮೊದಲಿನಿಂದಲೂ ವೈಷಮ್ಯ ಇರುತ್ತದೆ ಎಂದರೆ ಸರಿ. ಬಿಸಿ ಊಟದ ಮೇಲೆ ಅಧಿಕಾರಿಗಳು ಮತ್ತು ಎಸ್.ಡಿ.ಎಂ.ಸಿ ಅಧ್ಯಕ್ಷ ಇರುತ್ತಾನೆ ಎಂದರೆ ಸರಿ. ಆರೋಪಿತರು ಯಾವುದೇ ಅಧಿಕಾರಿ ಅಥವಾ ಅಧ್ಯಕ್ಷ ಇರುವುದಿಲ್ಲ. ಅದೇರೀತಿ ನಮ್ಮ ತಾಯಿಗೆ ತಲೆಗೆ ರಕ್ತಗಾಯವಾಗಿತ್ತು. ರಕ್ತ ಕಲೆ ಮೈಮೇಲೆ ಸೋರಿರುತ್ತದೆ. ನಾವು ಆಸ್ಪತ್ರೆಯಲ್ಲಿ ಒಂದು ರಾತ್ರಿ ಇದ್ದೆವು. ಆಸ್ಪತ್ರೆಯಿಂದ ದೂರು ಕೊಡಲು ಠಾಗೆ ಎಷ್ಟು ಗಂಟೆ ಬಂದಿರುತ್ತೇವೆ ಎಂದು ನನಗೆ ಇರುವುದಿಲ್ಲ. ದೂರನ್ನು ನನ್ನ ತಾಯಿ ಹೇಳಿ ಬರೆಸಿರುತ್ತಾಳೆ. ನಮ್ಮ ಮನೆಗೂ ಮತ್ತು ಆರೋಪಿತರ ಮನೆಗೂ 150 ಮೀಟರ ಅಂತರ ಇರುತ್ತದೆ. ಆರೋಪಿತರು ನನ್ನ ತಾಯಿಗೆ ಚಪ್ಪಲಿಯಿಂದ ಹೊಡೆದಿರುತ್ತಾರೆ, ಮತ್ತು ಕೈಯಿಂದ ಹೊಡೆದಿರುತ್ತಾರೆ, ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ನಾನು, ನನ್ನ ಮಗ, ಚಾಸಾ-1 ಆರೋಪಿತರಿಗೆ ನಾವೇ ಹೊಡೆದು ಈ ಸುಳ್ಳು ಪ್ರಕರಣ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಯಾರಿಗೂ ಹೊಡೆದಿಲ್ಲ, ಸೀರೆ ಹಿಡಿದು ಜಗಿಲ್ಲ, ಅವಾಚ್ಯ

ಶಬ್ದಗಳಿಂದ ಬೈದಿಲ್ಲ, ಜೀವ ಬೇದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲೆ ಆರೋಪಿತರು ಇದೇ ನ್ಯಾಯಾಲಯದಲ್ಲಿ ಪ್ರಕರಣ ಇದೆ ಎಂದರೆ ಸರಿ.

**ಮರು ವಿಚಾರಣೆ** ಃ ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ,**
**ಶೋರಾಪುರ.**
**ಸಿ.ಸಿ. ನಂ.1531/2023**

| | | |
|---|---|---|
| ಸಾಕ್ಷಿದಾರರ ಹೆಸರು | ಃ ದೇವಪ್ಪ | ಚಾಸಾ ಃ 03 |
| ತಂದೆ ಹೆಸರು | ಃ ಭೀಮರಾಯ | ಪ್ರಾಸಾ ಃ 04 |
| ವಯಸ್ಸು | ಃ 31 ವರ್ಷ | |
| ವೃತ್ತಿ | ಃ ಒಕ್ಕಲುತನ | |
| ವಾಸ ಸ್ಥಳ | ಃ ಮಂಗಳೂರು | |

**ಸಾಕ್ಷಿಗೆ ಇಂದು ದಿನಾಂಕಃ 22.04.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ-1 ರವರ ಪರಿಚಯ ಇದೆ. ಚಾಸಾ-4 ಮತ್ತು 5 ರವರ ಪರಿಚಯ ಇಲ್ಲ. ಆರೋಪಿತರ ಪರಿಚಯ ಇದೆ. ಈಗ ನಾನು ನೋಡುತ್ತಿರುವ ಪಂಚನಾಮೆ ಮೇಲೆ 3 ವರ್ಷಗಳ ಹಿಂದೆ ಸಹಿ ಮಾಡಿರುತ್ತೇನೆ. ಪೋಲೀಸರು ಸಹಿ ಮಾಡು ಅಂದಿದಕ್ಕೆ ನಾನು ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಸ.ಸ.ಅ ರವರ ವಿನಂತಿ ಮೇರೆಗೆ ಪರಿಗಣಿಸಿ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.)**

**ಪಾಟೀ ಸವಾಲು ಃ ಅಭೀಯೊಜನೆ ಪರ ಸ.ಸ.ರವರಿಂದಃ**

ದಿನಾಂಕ 21-06-2023 ರಂದು ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ಪೋಲೀಸರು ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿ ನನ್ನ ಮತ್ತು ಚಾಸಾ-2 ರವರ ಸಮಕ್ಷಮದಲ್ಲಿ ಚಾಸಾ-1 ರವರು ಗುನ್ನಾ ಸ್ಥಳ ತೋರಿಸಿದ

ಮೇರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆ ಕಾಲೆಕ್ಕ ಒಂದು ಬಡಿಗೆ ಮತ್ತು ಒಂದು ಚಪ್ಪಲಿಯನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ನನಗೆಗ ಗೊತ್ತಿರುವುದಿಲ್ಲ. ಪಂಚನಾಮೆ ಕಾಲಕ್ಕೆ ಒಂದು ಛಾಯಾಚಿತ್ರ ತೆಗೆದಿರುತ್ತಾರೆ ಎಂದರೆ ಸರಿ. ಸದರಿ ಛಾಯಾ ಚಿತ್ರದಲ್ಲಿ ನಾನು ಕಂಡುಬರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಂ.ಎಂ.ಹೆಚ್ ವಕೀಲರಿಂದಃ**

ಯಾವುದೇ ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಃ** ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.